# ಮಂಗಳೂರು ವಿಶ್ವವಿದ್ಯಾನಿಲಯ

ಸಂಖ್ಯೆ: ಮಂ.ವಿ./ಪ.ವಿ./ಕಾನೂನು/ಸಿ.ಆರ್.26/2021--22/ಇ.7

ಕುಲಸಚಿವರ (ಪರೀಕ್ಷಾಂಗ) ಕಛೇರಿ,
ಮಂಗಳಗಂಗೋತ್ರಿ - 574199.
ದಿನಾಂಕ: 04.01.2023

**ಪ್ರಕಟಣೆ**

2023 ಫೆಬ್ರವರಿ ತಿಂಗಳಲ್ಲಿ ನಡೆಯಲಿರುವ ಕಾನೂನು ಪದವಿಯ ಪುನರಾವರ್ತಿತ ವಿದ್ಯಾರ್ಥಿಗಳಿಗೆ ವಾರ್ಷಿಕ ಹಾಗೂ ಸೆಮಿಸ್ಟರ್ ಸ್ಕೀಂನ ಲಿಖಿತ ಪರೀಕ್ಷೆಗಳು ದಿನಾಂಕ 28.02.2023ರಿಂದ ಪ್ರಾರಂಭವಾಗಲಿರುವುದು ಎಂಬುದನ್ನು ಕಾನೂನು ಕಾಲೇಜಿನ ಪ್ರಾಂಶುಪಾಲರುಗಳು ಮತ್ತು ಸದರಿ ಪರೀಕ್ಷೆಗಳಿಗೆ ಹಾಜರಾಗುವ ಎಲ್ಲಾ ಅಭ್ಯರ್ಥಿಗಳ ಗಮನಕ್ಕೆ ಈ ಮೂಲಕ ತರಲಾಗಿದೆ. ಹಾಗೂ **ಮಂಗಳೂರು ವಿಶ್ವವಿದ್ಯಾನಿಲಯದ ಕಾನೂನು ಪದವಿಯ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಕಾನೂನು ಪದವಿಯ ಪರೀಕ್ಷೆಯು 2022-23ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಿಂದ ಅಂತಿಮವಾಗಿ ನಡೆಸಲಿದ್ದು, ಪರೀಕ್ಷೆ ಬರೆಯಲು ಬಾಕಿಯಿರುವ ಪುನರಾವರ್ತಿತ ವಿದ್ಯಾರ್ಥಿಗಳು 2023 ಫೆಬ್ರವರಿ ತಿಂಗಳಲ್ಲಿ ನಡೆಯಲಿರುವ ಪರೀಕ್ಷೆಗೆ ಆಯಾಯ ಕಾಲೇಜುಗಳಲ್ಲಿ ನೋಂದಣಿ ಮಾಡುವಂತೆ ತಿಳಿಸಲಾಗಿದೆ. ಫೆಬ್ರವರಿ 2023ರಲ್ಲಿ ನಡೆಸುವ ಪರೀಕ್ಷೆಗೆ ಹಾಜರಾಗಲು ಕೊನೆಯ ಅವಕಾಶವಾಗಿದ್ದು, ಮುಂದಕ್ಕೆ ಪುನರಾವರ್ತಿತ ವಿದ್ಯಾರ್ಥಿಗಳಿಗಾಗಿ ಯಾವುದೇ ವಿಷಯಕ್ಕೆ ಸಂಬಂಧಿಸಿ ಕಾನೂನು ಪದವಿ ಪರೀಕ್ಷೆಗಳನ್ನು ನಡೆಸಲಾಗುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ.**

**ಸೂಚನೆಗಳು:**

1. ಪ್ರಥಮ ಬಾರಿಗೆ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಎಲ್ಲಾ ವಿಷಯಗಳಿಗೆ/ಪತ್ರಿಕೆಗಳಿಗೆ ಕಡ್ಡಾಯವಾಗಿ ನೋಂದಣಿ ಮಾಡತಕ್ಕದ್ದು. ಸೆಮಿಸ್ಟರ್ ಸ್ಕೀಂನ ಮತ್ತು ವಾರ್ಷಿಕ ಪರೀಕ್ಷೆಯ ಎಲ್ಲಾ ಪುನರಾವರ್ತಿತ ವಿದ್ಯಾರ್ಥಿಗಳು ಒಂದೇ ಕಂಪ್ಯೂಟರೀಕೃತ ಅರ್ಜಿ ನಮೂನೆಯಲ್ಲಿ ಕಡು ನೀಲಿ/ಕಪ್ಪು ಬಣ್ಣದ ಶಾಯಿಯೊಂದಿಗೆ ಭರ್ತಿ ಮಾಡುವುದು. 2003 ಮತ್ತು ನಂತರದ ನೋಂದಣಿ ವಿದ್ಯಾರ್ಥಿಗಳು ಹೊಸ ಕಂಪ್ಯೂಟರೀಕೃತ ಅರ್ಜಿಯಲ್ಲಿ, 2003ರ ಹಿಂದಿನ ನೋಂದಣಿ ವಿದ್ಯಾರ್ಥಿಗಳು ಹಳೆ ಕಂಪ್ಯೂಟರ್ ಅರ್ಜಿ/ಮಾನ್ಯುವಲ್ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿ ಅರ್ಜಿ ಸಲ್ಲಿಸುವುದು.

2. ಸವಿವರವಾದ ವೇಳಾಪಟ್ಟಿಯನ್ನು ಶೀಘ್ರದಲ್ಲಿ ಪ್ರಕಟಿಸಲಾಗುವುದು.

3. ಅರ್ಜಿಯೊಂದಕ್ಕೆ ಶುಲ್ಕ ರೂ. 120.00 (ರೂಪಾಯಿ ನೂರ ಇಪ್ಪತ್ತು)ನ್ನು ಕಾಲೇಜು ಮುಖ್ಯಸ್ಥರಲ್ಲಿ ಪಾವತಿಸಿ ಗಣಕೀಕೃತ ಅರ್ಜಿ ನಮೂನೆಯನ್ನು ಪಡೆಯಬಹುದಾಗಿದೆ. ಅರ್ಜಿಯನ್ನು ವಿಶ್ವವಿದ್ಯಾನಿಲಯದ ಕಛೇರಿಗೆ ನೇರವಾಗಿ ಕಳುಹಿಸಬಾರದು.

4. *ಕುಲಸಚಿವರಿಂದ ಪ್ರವೇಶಾತಿ ಮತ್ತು ವರ್ಗಾವಣೆ ಪ್ರವೇಶಾತಿ ಅನುಮೋದಿಸಲ್ಪಡದ ವಿದ್ಯಾರ್ಥಿಗಳು ಮತ್ತು ಕಡಿಮೆ ಹಾಜರಾತಿ ಪಡೆದ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿಗಳನ್ನು ಸಲ್ಲಿಸಲು ಅನರ್ಹರಾಗಿರುತ್ತಾರೆ.* ಪ್ರವೇಶಾವಕಾಶವು ಅಮಾನ್ಯವಾಗಿರುವ ಅಥವಾ ವಿಶ್ವವಿದ್ಯಾನಿಲಯದಿಂದ ಪ್ರವೇಶವು ಅನುಮೋದಿತವಾಗಿಲ್ಲದ ಅಥವಾ ನಿರ್ಧಿಷ್ಟಪಡಿಸಲಾದ ವಿದ್ಯಾರ್ಥಿಗಳ ಸಂಖ್ಯೆಗಿಂತ ಹೆಚ್ಚಿಗೆಯಾಗಿ ಕಾಲೇಜಿಗೆ ಅಥವಾ ವ್ಯಾಸಂಗ ಕ್ರಮಕ್ಕೆ ಪ್ರವೇಶ ಪಡೆದಿರುವ ಯಾವೊಬ್ಬ ವಿದ್ಯಾರ್ಥಿಯೂ, ಕಾಲೇಜು ಅಥವಾ ವಿಶ್ವವಿದ್ಯಾನಿಲಯವು ನಡೆಸುವ ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುವುದಿಲ್ಲ. ಅಲ್ಲದೆ ಆಯಾ ಕೋರ್ಸಿನ ನಿಯಮದ ಪ್ರಕಾರ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಲ್ಲದ ವಿದ್ಯಾರ್ಥಿಗಳ ಅರ್ಜಿಗಳನ್ನು ಸಲ್ಲಿಸಬಾರದು.

5. ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರವನ್ನು ಆರಿಸಲು ಅವಕಾಶವಿರುವುದಿಲ್ಲ.

6. *ವಿಶ್ವವಿದ್ಯಾನಿಲಯದ ವಿನಿಯಮಾವಳಿ (ರೆಗ್ಯುಲೇಶನ್) ಪ್ರಕಾರ ಪರೀಕ್ಷೆಗೆ ಹಾಜರಾಗಲು ಅರ್ಹತೆಯನ್ನು ಹೊಂದಿದ ಮತ್ತು ನಿಗದಿತ ಪತ್ರಿಕೆಗಳನ್ನು ಪೂರ್ತಿಗೊಳಿಸಿದ ವಿದ್ಯಾರ್ಥಿಗಳಿಗೆ ಮಾತ್ರ ಪರೀಕ್ಷಾ ಅರ್ಜಿಯನ್ನು ಸಲ್ಲಿಸಲು ಅನುಮತಿಯನ್ನು ನೀಡಲಾಗಿದೆ. ವಿಶ್ವವಿದ್ಯಾನಿಲಯದ ತಿದ್ದುಪಡಿ ವಿನಿಯಮದ ಪ್ರಕಾರ ಐದು ವರ್ಷಗಳ ವ್ಯಾಸಂಗ ಕ್ರಮದ ಕಾನೂನು ಪದವಿಯ 2006ನೇ ಹಾಗೂ ಹಿಂದಿನ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳು ಮತ್ತು ಮೂರು ವರ್ಷಗಳ ವ್ಯಾಸಂಗ ಕ್ರಮದ ಕಾನೂನು ಪದವಿಯ 2010ರ ಹಾಗೂ ಹಿಂದಿನ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯ ನಿಗದಿಪಡಿಸಿದ ವಿಶೇಷ ಪರೀಕ್ಷಾ ಶುಲ್ಕವನ್ನು ಪಾವತಿಸಿ ಪರೀಕ್ಷೆಗಳಿಗೆ ಹಾಜರಾಗಲು ಅರ್ಹರಾಗಿರುತ್ತಾರೆ. ಸದ್ರಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ವಿಶ್ವವಿದ್ಯಾನಿಲಯ ಪರೀಕ್ಷಾ ನಿಯಮಾವಳಿಗಳಿಗೆ ವಿರುದ್ಧವಾಗಿ ಅನರ್ಹ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಿದ್ದಲ್ಲಿ ಸಂಬಂಧಿತ ಕಾಲೇಜಿನ ಪ್ರಾಂಶುಪಾಲರನ್ನೇ ಹೊಣೆಗಾರರನ್ನಾಗಿ* ಮಾಡಲಾಗುವುದು.

7. ಇನ್ನಿತರ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸಿರುವುದರಿಂದ (ಕಾಲೇಜು ಮತ್ತು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿ) ಕಾಲೇಜುಗಳಲ್ಲಿ ಹಾಜರಿಲ್ಲದ ವಿದ್ಯಾರ್ಥಿಗಳು ಕೂಡಾ ನಿಗದಿತ ಶುಲ್ಕದೊಂದಿಗೆ ಪರೀಕ್ಷಾ ಅರ್ಜಿಯನ್ನು ಸಲ್ಲಿಸುವಂತೆ (ಇತರ ವಿದ್ಯಾರ್ಥಿಗಳೊಂದಿಗೆ) ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರುಗಳು ನಿಗಾವಹಿಸತಕ್ಕದ್ದು.

8. *ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳ ಪರೀಕ್ಷಾ ಹಣಕಾಸು ತಖ್ತೆ ಹಾಗೂ ಪರೀಕ್ಷಾರ್ಥಿಗಳ ಪಟ್ಟಿಯನ್ನು ಅನುಮೋದಿಸಲ್ಪಟ್ಟ ಪ್ರವೇಶಾನುಮೋದನೆ ಪಟ್ಟಿಯಲ್ಲಿ ಸೂಚಿಸಿರುವ ಮಾದರಿಯಲ್ಲಿ ಯಾವುದೇ ಕಾಗುಣಿತ ವ್ಯತ್ಯಾಸವಿಲ್ಲದಂತೆ ದಾಖಲಿಸಬೇಕು.*

9. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು (ದಂಡ ಶುಲ್ಕ ರಹಿತ ಮತ್ತು ವಿವಿಧ ದರಗಳಲ್ಲಿ ದಂಡಶುಲ್ಕ ಸಹಿತ) ಕಾಲೇಜಿನ ಮುಖ್ಯಸ್ಥರಲ್ಲಿ ಪಾವತಿ ಮಾಡಲು ಮತ್ತು ಅಭ್ಯರ್ಥನ ಪತ್ರಗಳನ್ನು ಸಲ್ಲಿಸಲು ಈ ಕೆಳಕಂಡ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

<u>ಪರೀಕ್ಷಾ ಶುಲ್ಕವನ್ನು ಕಟ್ಟಲು ನಿಗದಿಪಡಿಸಲಾದ ಅಂತಿಮ ದಿನಾಂಕ:</u>

| | | |
|---|---|---|
| ದಂಡಶುಲ್ಕ ರಹಿತ | . . . | 30.01.2023 |
| ದಂಡಶುಲ್ಕ ದಿನವೊಂದಕ್ಕೆ ರೂ. 55/- ರಂತೆ | . . . | 31.01.2023 ರಿಂದ 03.02.2023ರವರೆಗೆ |
| ದಂಡಶುಲ್ಕ ದಿನವೊಂದಕ್ಕೆ ರೂ.110/- ರಂತೆ | . . . | 04.02.2023 ರಿಂದ 07.02.2023ರವರೆಗೆ |

10. ಒಮ್ಮೆ ಪಾವತಿಸಲಾದ ಪರೀಕ್ಷಾ ಶುಲ್ಕವನ್ನು ಯಾವ ಕಾರಣಕ್ಕೂ ಮರುಪಾವತಿ ಮಾಡಲಾಗುವುದಿಲ್ಲ ಹಾಗೂ ಅದನ್ನು ಮುಂದಿನ ಪರೀಕ್ಷೆಗಳಿಗೆ ಸರಿದೂಗಿಸಿಕೊಳ್ಳಲಾಗುವುದಿಲ್ಲ.

11. ಫೆಬ್ರವರಿ 2023ರ ಪರೀಕ್ಷೆಯ ಫಲಿತಾಂಶ ಪ್ರಕಟವಾಗದ ವಿದ್ಯಾರ್ಥಿಗಳು ಮತ್ತು ಮರು ಮೌಲ್ಯಮಾಪನ ಮತ್ತು ಮರು ಸಂಕಲನಕ್ಕೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಮತ್ತು ಫಲಿತಾಂಶ ಪ್ರಕಟವಾಗಲು ಬಾಕಿ ಇರುವ ವಿದ್ಯಾರ್ಥಿಗಳು ಸಹ ಪರೀಕ್ಷೆಗೆ ನಿಗದಿಪಡಿಸಿದ ದಿನಾಂಕದೊಳಗಾಗಿ ಪರೀಕ್ಷಾ ಶುಲ್ಕದೊಂದಿಗೆ ಅಭ್ಯರ್ಥನ ಪತ್ರವನ್ನು ಸಲ್ಲಿಸತಕ್ಕದ್ದು. ಯಾವುದೇ ಕಾರಣಕ್ಕೂ ಅಂತಹ ಅಭ್ಯರ್ಥಿಗಳಿಗೆ ಪಾವತಿ ದಿನಾಂಕವನ್ನು ಮುಂದೂಡಲಾಗುವುದಿಲ್ಲ. ಪರೀಕ್ಷಾ ಅವ್ಯವಹಾರಗಳಲ್ಲಿ ಭಾಗಿಯಾಗಿ, ವಿಶ್ವವಿದ್ಯಾನಿಲಯದ ನಿರ್ಣಯ ಬಾಕಿ ಇರುವಂತಹ ಅಭ್ಯರ್ಥಿಗಳು ಸಹ ನಿಗದಿತ ಸಮಯದೊಳಗೆ ಶುಲ್ಕವನ್ನು ಪಾವತಿಸಬೇಕು ಮತ್ತು ಅಭ್ಯರ್ಥನ ಪತ್ರವನ್ನು ಸಲ್ಲಿಸಬೇಕು.

12. ಅಭ್ಯರ್ಥಿಗಳು ತಮ್ಮ ಪರೀಕ್ಷಾ ಶುಲ್ಕವನ್ನು ಕಾಲೇಜು ಆಫೀಸಿನಲ್ಲಿ ಪಾವತಿಸಬೇಕು ಮತ್ತು ಅರ್ಜಿಯನ್ನು ಕಾಲೇಜು ಮುಖ್ಯಸ್ಥರಲ್ಲಿ ಸಲ್ಲಿಸಬೇಕು. ಶುಲ್ಕವನ್ನು ಪಾವತಿಸಿದ ಬಗ್ಗೆ ಪಡೆದ ರಶೀದಿಯನ್ನು ಅರ್ಜಿಗೆ ಅಂಟಿಸದೆ ಪ್ರತ್ಯೇಕವಾಗಿ ಕಳುಹಿಸಿಕೊಡಬೇಕು ಹಾಗೂ ಮೊಬಲಗು, ದಿನಾಂಕ ಮತ್ತು ರಶೀದಿ ಸಂಖ್ಯೆಗಳನ್ನು ಆನ್‌ಲೈನ್ ಪರೀಕ್ಷಾ ಅರ್ಜಿಯಲ್ಲಿ ವಿವರವಾಗಿ ನಮೂದಿಸಬೇಕು.

13. *ಪರೀಕ್ಷಾ ಶುಲ್ಕದ ದರ :*

*I & II ವರ್ಷದ ಎಲ್‌ಎಲ್.ಬಿ. (5 ವರ್ಷಗಳು):*

| | | | |
|---|---|---|---|
| ಪೂರ್ಣ ಪರೀಕ್ಷೆಗೆ | . . . . | ರೂ. | 460.00 |
| ವಿಷಯವೊಂದಕ್ಕೆ | . . . . | ರೂ. | 110.00 |

*III, IV & V ವರ್ಷದ ಎಲ್‌ಎಲ್.ಬಿ. (5 ವರ್ಷಗಳು):*

| | | | |
|---|---|---|---|
| ಪೂರ್ಣ ಪರೀಕ್ಷೆಗೆ | . . . . | ರೂ. | 560.00 |
| ವಿಷಯವೊಂದಕ್ಕೆ | . . . . | ರೂ. | 140.00 |

*I, II & III ವರ್ಷದ ಎಲ್‌ಎಲ್.ಬಿ. (3 ವರ್ಷಗಳು):*

| | | | |
|---|---|---|---|
| ಪೂರ್ಣ ಪರೀಕ್ಷೆಗೆ | . . . . | ರೂ. | 560.00 |
| ವಿಷಯವೊಂದಕ್ಕೆ | . . . . | ರೂ. | 140.00 |

*ಸೆಮಿಸ್ಟರ್ ಸ್ಕೀಂ (3 ವರ್ಷಗಳು):*

| | | | |
|---|---|---|---|
| ಪೂರ್ಣ ಪರೀಕ್ಷೆಗೆ | . . . . | ರೂ. | 560.00 |
| ವಿಷಯವೊಂದಕ್ಕೆ | . . . . | ರೂ. | 140.00 |

*<u>ಸೆಮಿಸ್ಟರ್ ಸ್ಕೀಂ (5 ವರ್ಷಗಳು):</u>*

*I & II ವರ್ಷದ ಎಲ್‌ಎಲ್.ಬಿ. :*

| | | | |
|---|---|---|---|
| ಪೂರ್ಣ ಪರೀಕ್ಷೆಗೆ | . . . . | ರೂ. | 460.00 |
| ವಿಷಯವೊಂದಕ್ಕೆ | . . . . | ರೂ. | 110.00 |

*III, IV & V ವರ್ಷದ ಎಲ್‌ಎಲ್.ಬಿ. :*

| | | | |
|---|---|---|---|
| ಪೂರ್ಣ ಪರೀಕ್ಷೆಗೆ | . . . . | ರೂ. | 560.00 |
| ವಿಷಯವೊಂದಕ್ಕೆ | . . . . | ರೂ. | 110.00 |

14. ವಿದ್ಯಾರ್ಥಿಗಳು ಪರೀಕ್ಷೆಯ ಯಾವುದಾದರೂ ಭಾಗ/ ಭಾಗಗಳಿಗೆ ಪಾವತಿಸಲಿರುವ ಒಟ್ಟು ಪರೀಕ್ಷಾ ಶುಲ್ಕವು ನಿಗದಿತ ಪೂರ್ಣ ಪರೀಕ್ಷಾ ಶುಲ್ಕವನ್ನು ಮೀರಬಾರದು.

15. ವಿದೇಶಿ ಅಭ್ಯರ್ಥಿಗಳು ನಿಗದಿಪಡಿಸಿದ ಎಲ್ಲಾ ಶುಲ್ಕಗಳ ಮೂರು ಪಟ್ಟು ಶುಲ್ಕವನ್ನು ಪಾವತಿಸತಕ್ಕದ್ದು.

16. ಮೇಲೆ ನಿಗದಿಪಡಿಸಿದ ಪರೀಕ್ಷಾ ಶುಲ್ಕದ ಜೊತೆಗೆ ಪ್ರತೀ ಪರೀಕ್ಷೆಗೆ ಅರ್ಜಿ ಶುಲ್ಕ ರೂ.120.00 ಮತ್ತು ರೂ. 230.00 ಅಂಕಪಟ್ಟಿ ಶುಲ್ಕಗಳನ್ನು ಪಾವತಿಸತಕ್ಕದ್ದು.

17. ವಿದ್ಯಾರ್ಥಿಗಳಿಂದ ಪಡೆದ ಒಟ್ಟು ಶುಲ್ಕವನ್ನು ಈ ಕೆಳಗಿನ ಕೋಡ್ ಸಂಖ್ಯೆಗಳಲ್ಲಿ ಬ್ಯಾಂಕ್ ಚಲನ್ ಮುಖಾಂತರ ಮಂಗಳೂರು ವಿಶ್ವವಿದ್ಯಾನಿಲಯ ನಿಧಿಗೆ ಪಾವತಿಸತಕ್ಕದ್ದು.

ಅ) ಅರ್ಜಿ ಶುಲ್ಕ - 008/14
ಆ) ಪರೀಕ್ಷಾ ಶುಲ್ಕ - 008/23
ಇ) ಅಂಕಪಟ್ಟಿ ಶುಲ್ಕ - 008/24

18. ವಾರ್ಷಿಕ ಪರೀಕ್ಷೆಯ ಮತ್ತು ಸೆಮಿಸ್ಟರ್ ಸ್ಕೀಮ್‌ನ ಅಭ್ಯರ್ಥಿಗಳ ಪರೀಕ್ಷಾ ವಿವರಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಕಳುಹಿಸಿಕೊಡುವುದು.

19. ಈ ಕೆಳಗೆ ನಮೂದಿಸಿರುವ ತಖ್ತೆಗಳನ್ನು ಮತ್ತು ದಾಖಲೆ ಪತ್ರಗಳನ್ನು ತಪ್ಪದೇ ಈ ಕಛೇರಿಗೆ ದಿನಾಂಕ:**09.02.2023**ರ ಒಳಗಾಗಿ ಕಳುಹಿಸಿ ಕೊಡುವುದು.

ಅ) ಅಭ್ಯರ್ಥಿಗಳ ಪಟ್ಟಿ ತ್ರಿಪ್ರತಿಗಳಲ್ಲಿ ಲಗತ್ತಿಸಲಾದ ನಮೂನೆಯಂತೆ ನಿಗದಿತ ಸ್ಥಳಾವಕಾಶದೊಂದಿಗೆ (ರಿಮಾರ್ಕ್ಸ್ ಕಾಲಂನಲ್ಲಿ ಗಂಡು/ಹೆಣ್ಣು ಎಂದು ತಪ್ಪದೆ ನಮೂದಿಸಬೇಕು). *ಅಭ್ಯರ್ಥಿಗಳ ಹೆಸರುಗಳನ್ನು ಆಂಗ್ಲ ಭಾಷೆಯಲ್ಲೇ ನಮೂದಿಸಬೇಕು.*

ಆ) ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಪ್ರಾಂಶುಪಾಲರಿಂದ ದೃಢೀಕರಿಸಲ್ಪಟ್ಟ ಅರ್ಜಿಗಳು.

ಇ) ಕ್ರೋಢೀಕೃತ ಪರೀಕ್ಷಾ ಶುಲ್ಕವನ್ನು ಪಾವತಿಸಿದ ಒಂದು ಚಲನ್.

ಈ) ಹಣಕಾಸು ತ:ಖ್ತೆ.

ಉ) ಪ್ರತೀ ವರ್ಷ/ ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಸೂಚಿಸುವ ತ:ಖ್ತೆ (ಲಗತ್ತಿಸಲಾದ ನಮೂನೆಯಲ್ಲಿ)

ಊ) ಇತರ ಕಾಲೇಜು / ವಿಶ್ವವಿದ್ಯಾನಿಲಯಗಳಿಂದ ವರ್ಗಾವಣೆ ಪ್ರವೇಶಾತಿ ಹೊಂದಿದ ವಿದ್ಯಾರ್ಥಿಗಳ ಬಗ್ಗೆ ರಿಮಾರ್ಕ್ ಕಾಲಂನಲ್ಲಿ ತಪ್ಪದೇ ನಮೂದಿಸಬೇಕು.

***ಟಿಪ್ಪಣಿ:*** *ಪ್ಯಾರಾ 19ರಲ್ಲಿ ಸೂಚಿಸಿರುವ ಅವಶ್ಯ ದಾಖಲೆ ಪತ್ರಗಳಿಲ್ಲದ ಅಭ್ಯರ್ಥಿಗಳ ಪಟ್ಟಿಯನ್ನು ತಿರಸ್ಕರಿಸಲಾಗುವುದು. ಅಭ್ಯರ್ಥನ ಪಟ್ಟಿ ಸ್ಪಷ್ಟವಾಗಿದ್ದು ಅಭ್ಯರ್ಥನ ಪಟ್ಟಿಯಲ್ಲಿ ಕೋಡ್ ಸಂಖ್ಯೆಗಳನ್ನು ನಮೂದಿಸದೆ ವಿಷಯಗಳನ್ನು ಬರೆಯತಕ್ಕದ್ದು. ಹಾಗೂ ಲಗತ್ತಿಸಲಾದ ನಮೂನೆಯಂತೆ ನಿಗದಿತ ಸ್ಥಳಾವಕಾಶದೊಂದಿಗೆ ಅಭ್ಯರ್ಥನ ಪಟ್ಟಿಯನ್ನು ಕಳುಹಿಸಿಕೊಡತಕ್ಕದ್ದು.*

05/01/2023

ಕುಲಸಚಿವರು (ಪರೀಕ್ಷಾಂಗ)

*ರಿಗೆ:*

1. ಪ್ರಾಂಶುಪಾಲರು, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಲಾ ಕಾಲೇಜು, ಮಂಗಳೂರು-575 003.
2. ಪ್ರಾಂಶುಪಾಲರು, ವೈಕುಂಠ ಬಾಳಿಗಾ ಲಾ ಕಾಲೇಜು, ಕುಂಜಿಬೆಟ್ಟು, ಉಡುಪಿ-576 102.
3. ಪ್ರಾಂಶುಪಾಲರು, ಕೆ.ವಿ.ಜಿ. ಲಾ ಕಾಲೇಜು, ಶ್ರೀ ಚೆನ್ನಕೇಶವ ದೇವಸ್ಥಾನದ ಹತ್ತಿರ, ಸುಳ್ಯ-574 239.
4. ಪ್ರಾಂಶುಪಾಲರು, ವಿವೇಕಾನಂದ ಲಾ ಕಾಲೇಜು, ನೆಹರು ನಗರ, ಪುತ್ತೂರು-574 203.

*ಪ್ರತಿ :*

1. ಕುಲಸಚಿವರು/ ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
2. ವಿಶೇಷಾಧಿಕಾರಿ (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
3. ಸಹಾಯಕ ಕುಲಸಚಿವರು(ಪರೀಕ್ಷಾಂಗ) 1 & 2, ಮಂಗಳೂರು ವಿಶ್ವವಿದ್ಯಾನಿಲಯ.
4. ಕುಲಪತಿಯವರ ಆಪ್ತ ಕಾರ್ಯದರ್ಶಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ
5. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ವಿಶ್ವವಿದ್ಯಾನಿಲಯ ಕಾಲೇಜು ಆವರಣ, ಮಂಗಳೂರು.
6. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಡಿ.ಸಿ. ಆಫೀಸಿನ ಬಳಿ, ದ.ಕ., ಮಂಗಳೂರು.
7. ಅಧೀಕ್ಷಕರು ಎಸ್.1, ಎಸ್.2, ಎಸ್.3, ಎಸ್.4 ಹಾಗೂ ಎಸ್.6
8. ಸಿಸ್ಟಂ ಅನಾಲಿಸ್ಟ್, ಕಂಪ್ಯೂಟರ್ ವಿಭಾಗ, ಕುಲಸಚಿವ (ಪರೀಕ್ಷಾಂಗ)ರ ಕಛೇರಿ, ಮಂಗಳೂರು ವಿಶ್ವವಿದ್ಯಾನಿಲಯ.
9. ಆಪ್ತ ಸಹಾಯಕರು, ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
10. ಇ.9/ಇ.11/ಇ.30 ಕಾರ್ಯನಿರ್ವಾಹಕರು.